# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 13.09.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ತೃತೀಯ ವಿಶೇಷ ಸಭೆಯ ನಡವಳಿಗಳು.

ಉಪಸ್ಥಿತರು:

ಅನುಪಸ್ಥಿತರು:

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ರಾಷ್ಟ್ರೀಯ ಶಿಕ್ಷಣ ನೀತಿ – 2020 ರ ಅನುಷ್ಠಾನದ ಬಗ್ಗೆ ಸಭೆಗೆ ತಿಳಿಸುತ್ತಾ ಶೈಕ್ಷಣಿಕ ವರ್ಷ 2021-22 ನೇ ಸಾಲಿನ ಪ್ರಥಮ ವರ್ಷದ ಮಾದರಿ ಪಠ್ಯಕ್ರಮ ರಚನೆಯಾಗಿದ್ದು, ಶೀಘ್ರದಲ್ಲಿ ಸದರಿ ಮಾದರಿ ಪಠ್ಯಕ್ರಮಗಳನ್ನು ಸಂಬಂಧಿತ ಅಧ್ಯಯನ ಮಂಡಳಿಗಳು, ನಿಕಾಯಗಳು ಹಾಗೂ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿ, ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಲಾಗುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು.
2. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಕಾಲೇಜು ಅಭಿವೃದ್ಧಿ ಮಂಡಳಿ ಸಭೆಯು ಇತ್ತೀಚೆಗೆ ನಡೆದಿದ್ದು, ಸದರಿ ಸಭೆಯ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲಾಗುವುದು ಎಂದು ತಿಳಿಸುತ್ತಾ, ಸದರಿ ಕಾಲೇಜಿನಲ್ಲಿ ಈ ಹಿಂದೆ ನಡೆಸಲಾಗುತ್ತಿದ್ದ ಬಿ.ಬಿ.ಎ. (ಟಿ.&ಟಿ.) ಪದವಿ ತರಗತಿಗಳನ್ನು ಈ ಶೈಕ್ಷಣಿಕ ವರ್ಷದಿಂದ ಪುನರಾರಂಭಗೊಳಿಸಲಾಗುವುದೆಂಬ ವಿಷಯವನ್ನು ಸಭೆಗೆ ತಿಳಿಸಿದರು. ಸದರಿ ಕಾಲೇಜಿನಲ್ಲಿ ವಿದ್ಯಾರ್ಥಿ ಸಹಕಾರ ಸಂಘ ಪುನರಾರಂಭಗೊಂಡಿರುವ ವಿಷಯವನ್ನೂ ಸಭೆಗೆ ತಿಳಿಸಿದರು.
3. ಮೂಡಬಿದರೆಯ ಬನ್ನಡ್ಕದಲ್ಲಿ ಪ್ರಾರಂಭಗೊಳ್ಳುತ್ತಿರುವ ವಿಶ್ವವಿದ್ಯಾನಿಲಯದ ಘಟಕ ಕಾಲೇಜಿಗೆ ಪ್ರಾಂಶುಪಾಲರನ್ನು ನೇಮಕಾತಿ ಮಾಡುವ ಬಗ್ಗೆ ಪ್ರಸ್ತಾವಿಸುತ್ತಾ, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಶಿಕ್ಷಕರ ಸಾಮಾನ್ಯ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದೆಂಬುದಾಗಿ ತಿಳಿಸಿದರು.
4. ದಿನಾಂಕ 15.09.2021 ರಿಂದ ದಿನಾಂಕ 17.09.2021ರವರೆಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುತ್ತಿರುವ 16ನೇ ಕನ್ನಡ ವಿಜ್ಞಾನ ಸಮ್ಮೇಳನಕ್ಕೆ ಎಲ್ಲಾ ಮಾನ್ಯ ಸಿಂಡಿಕೇಟು ಸದಸ್ಯರುಗಳನ್ನು ಆಮಂತ್ರಿಸಿದರು.
5. ದಿನಾಂಕ 22.09.2021ರಂದು ಮಂಗಳೂರು ವಿಶ್ವವಿದ್ಯಾನಿಲಯದ 41ನೇ ಸಂಸ್ಥಾಪನಾ ದಿನಾಚರಣೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸುವುದಾಗಿ ತಿಳಿಸಿದರು. ಶಿಕ್ಷಕರ ದಿನಾಚರಣೆಯನ್ನು ಸದರಿ ದಿನದಂದೇ ನಡೆಸಲಾಗುವುದೆಂಬುದಾಗಿಯೂ ತಿಳಿಸಿದರು. ಈ ಸಂದರ್ಭದಲ್ಲಿ ಪ್ರೊ. ಕೆ. ಆರ್. ಶ್ರೀಧರ್, UGC BSR Faculty and Adjunct Professor, ಸ್ನಾತಕೋತ್ತರ ಜೀವವಿಜ್ಞಾನ ವಿಭಾಗ ಮತ್ತು ಪ್ರೊ. ವಿಶಾಲಾಕ್ಷಿ ಬಿ., ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ ಇವರುಗಳನ್ನು ಗೌರವಿಸಲಾಗುವುದೆಂಬುದಾಗಿಯೂ ತಿಳಿಸಿದರು.

6. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳನ್ನು ನಡೆಸುವ ಬಗ್ಗೆ ತಿಳಿಸುತ್ತಾ ಪ್ರಸ್ತುತ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಅಂತಿಮ ತರಗತಿಗಳ ಪರೀಕ್ಷೆಗಳನ್ನು ಶೀಘ್ರದಲ್ಲಿ ನಡೆಸಲಾಗುವುದೆಂಬುದಾಗಿ ತಿಳಿಸಿದರು.

## I. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ: ವಿ.ಸ. 3:1(2021) |
| ವಿಷಯ: | ಡಾ. ಅನಿತಾ ರವಿಶಂಕರ್, ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ – ಅಪರಾಧ ನಿರ್ಣಯದ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯ ಬಗ್ಗೆ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ, ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಅಂತಿಮವಾಗಿ, ಸದರಿಯವರು ಈಗಾಗಲೇ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ವಿಶ್ವವಿದ್ಯಾನಿಲಯದ ಗೌರವವನ್ನು ಎತ್ತಿಹಿಡಿಯುವಂತಹ ರೀತಿಯಲ್ಲಿ ನಿರ್ಣಯವನ್ನು ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ: ವಿ.ಸ. 3:2(2021) |
| ವಿಷಯ: | ಡಾ. ಎಂ. ಜಯಶಂಕರ್, ಸೂಕ್ಷ್ಮಾಣು ಜೀವವಿಜ್ಞಾನದ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಹಾಗೂ ಇಲಾಖಾ ವಿಚಾರಣೆಯ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಡಾ. ಎಂ. ಜಯಶಂಕರ್ ಇವರ ಅಮಾನತು ಆದೇಶವನ್ನು ಹಿಂಪಡೆದು, ಸದರಿಯವರನ್ನು ತಕ್ಷಣದಿಂದ ಅನ್ವಯವಾಗುವಂತೆ, ಸದರಿಯವರ ಮಾತೃ ವಿಭಾಗವಾದ ಸ್ನಾತಕೋತ್ತರ ಸೂಕ್ಷ್ಮಾಣುಜೀವವಿಜ್ಞಾನ ಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, "ಜ್ಞಾನ ಕಾವೇರಿ", ಚಿಕ್ಕ ಅಳುವಾರ, ಕೊಡಗು ಇಲ್ಲಿಗೆ ವರ್ಗಾವಣೆ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.<br>ಮುಂದುವರಿದು, ಮುಂದಿನ ಆದೇಶದವರೆಗೆ ಸದರಿಯವರಿಗೆ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಆಡಳಿತಾತ್ಮಕ ಜವಾಬ್ದಾರಿಗಳನ್ನು ನೀಡಬಾರದೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. ಹಾಗೂ ಅಮಾನತ್ತಿನ ಅವಧಿಯ ವೇತನದ ವ್ಯತ್ಯಾಸವನ್ನು ನಿಯಮಾನುಸಾರ ಪಾವತಿಸಬಹುದೆಂದು ಅಭಿಪ್ರಾಯಪಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ: ವಿ.ಸ. 3:3(2021) |
| ವಿಷಯ: | ಡಾ. ಎಂ. ಜಯಶಂಕರ್, ಸೂಕ್ಷ್ಮಾಣು ಜೀವವಿಜ್ಞಾನದ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಮೇಲಿನ ಆರೋಪಗಳ ಬಗ್ಗೆ – ಸಮಜಾಯಿಷಿಕೆ ಕುರಿತು. |
| ನಿರ್ಣಯ: | ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಡಾ. ಎಂ. ಜಯಶಂಕರ್ ಇವರು ನೀಡಿರುವ ದಿನಾಂಕ 05.08.2021ರ ಸಮಜಾಯಿಷಿಕೆಯನ್ನು ಅಸಂಮಂಜಸವೆಂದು ಪರಿಗಣಿಸಿ ತಿರಸ್ಕರಿಸಲಾಯಿತು. ಮುಂದುವರಿದು, ಸದರಿಯವರ ಮೇಲೆ ಮಾಡಲಾಗಿರುವ ಎಲ್ಲಾ ಆರೋಪಗಳ ಬಗ್ಗೆ ಸಮಗ್ರ ಇಲಾಖಾ ವಿಚಾರಣೆ ನಡೆಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ: ವಿ.ಸ. 3:4(2021) |
| ವಿಷಯ: | ಡಾ. ಕರುಣಾಕರ ಎನ್.ವಿ., ತಾತ್ಕಾಲಿಕ/ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ಅಂತಿಮವಾಗಿ, ಡಾ. ಕರುಣಾಕರ ಎನ್. ವಿ. ಅವರ ಮನವಿಯನ್ನು ಭಾಗಶಃ ಪರಿಗಣಿಸಲು ಸಿಂಡಿಕೇಟು ನಿರ್ಣಯಿಸಿತು. ಶ್ರೀಯುತರ ಸೇವೆಯನ್ನು ಕೆಲಸಕ್ಕೆ ಸೇರಿದ ದಿನಾಂಕದಿಂದ ಸಕ್ರಮಗೊಳಿಸಲು (ಆರ್ಥಿಕ ಸೌಲಭ್ಯಗಳನ್ನು ಹೊರತುಪಡಿಸಿ) ತೀರ್ಮಾನಿಸಲಾಯಿತು. ಎಲ್ಲಾ ಆರ್ಥಿಕ ಹಾಗೂ ಸೇವಾ ಸೌಲಭ್ಯಗಳನ್ನು ಇಂದಿನ (ದಿನಾಂಕ 13.09.2021) ಸಿಂಡಿಕೇಟು ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ನಿಯಮಾನುಸಾರ ಜಾರಿಗೊಳಿಸಲು ತೀರ್ಮಾನಿಸಲಾಯಿತು. ಈ ಬಗ್ಗೆ ಕರ್ನಾಟಕ ರಾಜ್ಯ ಸರಕಾರದ ಅನುಮೋದನೆಯನ್ನು ಪಡೆಯಲು ನಿರ್ಣಯಿಸಲಾಯಿತು. ಈ ತೀರ್ಮಾನವನ್ನು ಪೂರ್ವೋದಾರಣೆಯೆಂದು ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು. ಈ ನಿರ್ಣಯದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಸಹ ನಿರ್ಣಯಿಸಲಾಯಿತು.<br>ಮೇಲಿನ ನಿರ್ಣಯಕ್ಕೆ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರು ತಮ್ಮ ಅಸಮ್ಮತಿ (Dissent Note)ಯನ್ನು ಸಲ್ಲಿಸಿದರು. ಸದರಿಯವರು ಸಲ್ಲಿಸಿದ Dissent Note ಈ ಕೆಳಗಿನಂತಿದೆ.<br>1. There are many such cases in the University and Justice should be given to all the affected teachers not only for the people who have financial capacity to go to the Court.<br>2. I anticipate serious violation of rules of UGC Recruitment in future.<br>3. It may set bad precedent in future and the University may get affected financially. |

**ಇತರ ವಿಷಯಗಳು:**

1. ದಿನಾಂಕ 27.08.2021ರಂದು ನಡೆದ ಸಿಂಡಿಕೇಟು ಸಭೆಯು ದಿನಾಂಕ 23.04.2021ರಂದು ನಡೆದ ಸಿಂಡಿಕೇಟು ಸಭೆಯ ಅನುಸರಣಾ ವರದಿಯನ್ನು ಅನುಮೋದಿಸುವ ಸಂದರ್ಭದಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.3:33 (2021) ರ ಅನುಸರಣಾ ವರದಿಗೆ ಸಂಬಂಧಿಸಿ, ಈ ಕೆಳಗಿನ ನಿರ್ದೇಶನವನ್ನು ನೀಡಿರುತ್ತದೆ.
   *"ಹುದ್ದೆ ಸಹಿತ ವರ್ಗಾವಣೆಗೊಂಡಿರುವ ಎಲ್ಲಾ ಅಧ್ಯಾಪಕರನ್ನು ಅವರ ದಾಖಲೆಯನ್ನು ಪರಿಶೀಲಿಸಿ, ಸದರಿಯವರು ಆಯ್ಕೆಯಾಗಿರುವ ಮೂಲ ಹುದ್ದೆಗೆ ಹುದ್ದೆ ಸಮೇತ ವರ್ಗಾಯಿಸಿ ದಿನಾಂಕ 08.09.2021ರೊಳಗಡೆ ಆದೇಶ ನೀಡುವ ನಿರ್ಣಯವನ್ನು ಕೈಗೊಂಡು, ಈ ಬಗ್ಗೆ ಕ್ರಮಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು."*
   ಅದರಂತೆ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.3:33 (2021)ರ ಅನುಬಂಧ 1ರಲ್ಲಿ "ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಬೋಧಕ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಹುದ್ದೆ ಸಹಿತ ವರ್ಗಾವಣೆ ಮಾಡಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ಸಮಿತಿಯು ದಿನಾಂಕ 08.04.2021ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ವರದಿಯ ಶಿಫಾರಸ್ಸುಗಳನ್ನು ಪರಿಗಣಿಸಿಕೊಂಡು, ಸಾರ್ವಜನಿಕ ಹಿತದೃಷ್ಟಿಯಿಂದ, ಅನುಬಂಧ 2ರಲ್ಲಿ ಒದಗಿಸಿರುವ "ಹುದ್ದೆ ಸಹಿತ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ವರ್ಗಾವಣೆಗೊಂಡಿರುವ ಅಧ್ಯಾಪಕರ ಪಟ್ಟಿ"ಯಿಂದ ಈ ಕೆಳಗಿನ ಅಧ್ಯಾಪಕರುಗಳನ್ನು ಸದರಿಯವರು ಆಯ್ಕೆಗೊಂಡಿರುವ ಮೂಲ ಹುದ್ದೆಗೆ ತಕ್ಷಣವೇ ವರ್ಗಾವಣೆ ಮಾಡಿ ಆದೇಶ ಹೊರಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

| ಕ್ರ. ಸಂ. | ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗ | ಮೂಲ ನೇಮಕಾತಿಯಾದ ಘಟಕ ಕಾಲೇಜು |
|---|---|---|---|
| 1. | ಡಾ. ರಾಜ್ ಪ್ರವೀಣ್ ಸಿ.ಎಂ. | ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು |
| 2. | ಡಾ. ವಜೀದಾ ಬಾನೊ | ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. | ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ |
| 3. | ಡಾ. ನಾಗಪ್ಪಗೌಡ ಆರ್. | ಸಹ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು |
| 4. | ಡಾ. ದಯಾನಂದ ನಾಯ್ಕ್ | ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. (ಪ್ರಸ್ತುತ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿ ಪ್ರಭಾರ ಪ್ರಾಂಶುಪಾಲರಾಗಿರುತ್ತಾರೆ.) | ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ |

2. ಮೇಲ್ಕಂಡ ನಿರ್ಣಯಕ್ಕೆ ಸಂಬಂಧಿಸಿ, ಮೇಲಿನ ನಾಲ್ಕು ಅಧ್ಯಾಪಕರು ವಿಶ್ವವಿದ್ಯಾನಿಲಯದ ವಿರುದ್ಧವಾಗಿ ನ್ಯಾಯಾಲಯದಲ್ಲಿ ದಾವೆ ಹೂಡುವ ಸಂಭವವಿರುವುದರಿಂದ ಈ ಕುರಿತಾಗಿ ನ್ಯಾಯಾಲಯದಲ್ಲಿ ಶೀಘ್ರವಾಗಿ CAVEAT ಅರ್ಜಿಯನ್ನು ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

3. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಅಂತಿಮ ತರಗತಿಗಳ ಪರೀಕ್ಷೆಗಳನ್ನು Offline ಮೂಲಕ ದಿನಾಂಕ 30.09.2021ರಿಂದ ಪ್ರಾರಂಭಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಮೌಲ್ಯಮಾಪನ ಮಾಡಲು ಬಾಕಿ ಉಳಿದಿರುವ ಎಲ್ಲಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಶೀಘ್ರದಲ್ಲಿ ಆರಂಭಿಸಲು ಕ್ರಮಕೈಗೊಳ್ಳಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

4. ಸಿಂಡಿಕೇಟು ಸದಸ್ಯರು ಇತರೇ ಸಮಿತಿ ಸಭೆಗಳಿಗೆ ಹಾಜರಾದ ಪಕ್ಷದಲ್ಲಿ ಸದರಿಯವರಿಗೆ ಸಿಂಡಿಕೇಟು ಸಭೆಗೆ ಪಾವತಿಸುವ ಪ್ರಯಾಣ ಮತ್ತು ಉಪಸ್ಥಿತಿ ಭತ್ಯೆಯನ್ನೇ ಪಾವತಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಲಾಯಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/- ಸಹಿ/-

ಕುಲಸಚಿವರು ಕುಲಪತಿಗಳು.